'ಲೇ ಉಸ್ಮಾನ್, ಒಳ್ಳೇ ಕೆಲ್ಸ ಮಾಡಿದ್ದೀಯ; ಅದನ್ನ ಮೆಚ್ಕಂಡೂ ಆಯ್ತು. ಈಗ ನಿಜ ಹೇಳೋ ಸಮಯ. ತಪ್ಪೇ ಮಾಡ್ದೆ ಸಿಕ್‌ಬೀಳೋದು ಮತ್ತು ಅದಕ್ಕಾಗಿ ಒದೆ ತಿನ್ನೋದು ಜಾಣತನಾನಾ? ನೀನೇ ಹೇಳು. ಜೀವನದಲ್ಲಿ ಮಾನ ಮರ್ಯಾದೆ ಮುಖ್ಯ. ಕರಪತ್ರದ ಕಥೆ ಹಳೆದಾಗೋಯ್ತು, ಅದ್ನ ಬಿಟ್ಟು ಬೇರೆ ಹೇಳು...' ಅಂದೆ.

ಬದಲಾದ ವರಸೆಗೆ ಉಸ್ಮಾನ್ ದಂಗಾದ. 'ನಾನ್ ಹೇಳ್ತಿರೋದು ಸತ್ಯಾನೇ ಸಾ...' ಗಂಟಲು ಒಣಗಿತು. ನಾಲಿಗೆ ಒದ್ದೆ ಮಾಡಿಕೊಂಡು ಉಗುಳು ನುಂಗಿದ. ಕಣ್ಣುಗಳಲ್ಲಿ ಗಾಬರಿ ಕಾಣಿಸಿತು.

ಸತ್ಯ ಅನ್ನೋದು ಕನ್ನಡಿ ಇದ್ದಂಗೆ. ನಾಲಗೆ ಸುಳ್ಳನ್ನು ತಿರುವಿ ತಿರುವಿ ಹೇಳ್ತಾ ಇದ್ರೂ ಬಡ್ಡೀಮಗಂದು ಬಾಡಿ ಲಾಂಗ್ವೇಜು ಎಲ್ಲಾ ಬಿಟ್ಟುಕೊಟ್ಟುಬಿಡುತ್ತೆ.

'ರಘೂ, ಬೇರೆ ದಾರಿ ಇಲ್ಲ. ಇವನ್ನ ಸೆಲ್ಲಾರ್‌ಗೆ ಕರ್ಕೊಂಡ್ ಹೋಗು. ನಮ್ಮ ಆತಿಥ್ಯ ಅನುಭವಿಸೋ ಅದೃಷ್ಟ ಇವ್ನ ಹಣೇಲಿ ಬರೆದಿದ್ರೆ ಯಾರೇನ್ ಮಾಡೋಕಾಗುತ್ತೆ?' ಅಂದೆ. ಕತ್ತಲಲ್ಲಿ ಬಿಟ್ಟ ಬಾಣ ಗುರಿ ತಲುಪಿತು.

ಮುಂದಿದ್ದ ಕುರ್ಚಿ ಮೇಲೆ ಕೂತಿದ್ದವ ದಢಾರನೆ ಕುಸಿದು ನನ್ನ ಕುರ್ಚಿಯ ಬಳಿ ತೆವಳಿದ. 'ಸಾಬ್, ಹೆಂಡ್ತಿ ಮಕ್ಳ ಮೇಲಾಣೆ... ಮಗಾ ಬಗ್ಗೆ ನಂಗೇನು ಗೊತ್ತಿಲ್ಲ. ಅವತ್ತು ಖಾಲಿ ಬಸ್ ತಗಂಡು ಟ್ರಿಪ್‌ಗೆ ಹೋಯ್ತಾ ಇದ್ದೆ. ಸಿಗ್ನಲ್ ಬಳಿ ನಿಲ್ಸಿಕೊಂಡಿದ್ದೋನಿಗೆ ಆ ದರಿದ್ರ ಹೆಂಗ್ಸು ಕೈ ತೋರಿದ್ಲು... ಹೆಂಗೂ ಖಾಲಿ ಹೋಯ್ತಾ ಇದ್ದೀನಲ್ಲಾ ಅಂತ ಹತ್ತಿಸಿಕೊಂಡೆ. ಹೋಗ್ತಾ ಹೋಗ್ತಾ ನನ್ ಹೆಸ್ರು, ಮೊಬೈಲ್ ನಂಬ್ರು ತಗಂಡ್ಳು. ಕೈಗೊಂದು ಪಾಂಪ್ಲೆಟ್ಟು ಕೊಟ್ಳು, ಅದರಲ್ಲಿ ಮಗಾ ಫೋಟೊ, ಮೊಬೈಲು ನಂಬ್ರು ಇತ್ತು... ಅಣ್ಣಾ, ಈ ಕೂಸು ಹೊಸೂರು ರಸ್ತೆ ದರ್ಗಾ ಹತ್ರ ಐತೆ. ಅವರ ಕಡೇವ್ರಿಗೆ ಫೋನು ಮಾಡಿ ಹೇಳ್ಬಿಡಿ, ಬಂದು ಕರ್ಕೊಂಡು ಹೋಗ್ತಾರೆ. ನಿನಗೆ ಪುಣ್ಯ ಬತ್ತದೆ ಅಂದ್ಲು. ಏನೋ ಒಳ್ಳೇ ಕೆಲ್ಸ ಆಗ್ಲಿಬಿಡು ಅಂತಾ ಅವರಪ್ಪನಿಗೆ ಫೋನು ಮಾಡಿ ವಿಷಯ ತಿಳಿಸ್ದೆ. ಸಂಜೆ ಹೊತ್ಗೆ ಅವ್ಳೇ ತಿರುಗಿ ಫೋನು ಮಾಡಿ ಅಣ್ಣಾ, ವಿಷಯ ತಿಳಿಸುದ್ರಾ? ಅಂತ ಕೇಳುದ್ಲು. ಹೌದು ಅಂದೆ. ಇಷ್ಟೇ ಸಾರ್ ನನ್ನ ಅವಳ ಮಧ್ಯೆ ನಡೆದಿದ್ದು... ನನ್ನ ನಂಬಿ, ತಪ್ಪೇನಾದ್ರೂ ಇದ್ರೆ ನಾಲ್ಕೇಟು ಬಿಗೀರಿ ಸಾ, ಅದೇ ವಯಸ್ಸಿನ ಮಗಾ ಐತೆ ನಂಗೆ. ಅಂಗೆಲ್ಲಾ ಮಣ್ಣು ತಿನ್ನೋ ಕೆಲಸ ಮಾಡೋನಲ್ಲ...' ಉಸ್ಮಾನ ಗೋಗರೆದ.

'ಇದನ್ನೇ ಮೊದ್ಲು ಬೊಗಳಾಕೆ ಏನಾಗಿತ್ತಲೇ ಧಾಡಿ?...' ಅಂತ ಗದರಿಸಿದೆ.

'ಹೇಳಾನ ಅನ್ಕಂಡೆ ಸಾ... ಆಮೇಲೆ ಆ ಹೆಂಗ್ಸಿಗೂ ನಂಗೂ ಸಂಬಂಧ ಕಟ್ಟಿ ನನ್ನೂ ಒಳ್ಗೆ ತಳ್ಬಿಡ್ತಿರೇನೋ ಅಂತ ಭಯ ಬಿದ್ದೆ...' ಸ್ವರ ಇಳಿಸಿ ಮಾತಾಡಿದ ಉಸ್ಮಾನ.

'ಹೌದಲ್ವಾ, ಯಾಕಿರ್‍ಬಾರ್ದು?... ಈಗ್ಲೂ ನೀನು ಭಾಳಾ ಸಾಚಾ ಅಂತ ನಂಬಿದೀವೀಂತ ತಿಳ್ಕೊಂಡಿಯೇನು?...' ನನ್ನ ಕೋಪ ಇನ್ನೂ ಆರಿರಲಿಲ್ಲ.

'ಸಾರ್... ಹಂಗೆಲ್ಲಾ ಅನ್ನಬ್ಯಾಡಿ... ಬೇಕಾದ್ರೆ ನನ್ನ ಫೋನು ಕೊಟ್ಬಿಡ್ತೀನಿ, ಆಕೆಗೆ ನಾನು ಯಾವತ್ತಾದ್ರೂ ಒಂದು ಫೋನು ಅಂತ ಮಾಡಿದ್ರೆ ನನ್ನ ಹಂಗೇ ಸಿಗ್ದು ತೋರಣ ಕಟ್ಬಿಡಿ...' ಅಂದ.

ಅಷ್ಟು ಹೊತ್ತಿಗಾಗಲೇ ಉಸ್ಮಾನನ ಕಾಲ್ ಡೀಟೈಲ್ಸನ್ನು ಮುಂದಿರಿಸಿಕೊಂಡಿದ್ದೆ. ಮಗು ಸಿಕ್ಕಿದ ದಿನ ಆ ಹೆಂಗಸಿನಿಂದ ಇವನಿಗೆ ಒಂದು ಕರೆ ಬಂದದ್ದು ಬಿಟ್ಟರೆ 'ಅಂಥಾ' ಪರಿಚಯ ಇರುವಂತೆ ಕಾಣಲಿಲ್ಲ. ಪ್ರಕರಣಕ್ಕೆ ಇತಿಶ್ರೀ ಹಾಡಲು ಆಕೆ ಸಿಗಲೇಬೇಕಿತ್ತು. ಸಿಕ್ಕುವವರೆಗೆ ಉಸ್ಮಾನನ್ನು ಬಿಟ್ಟು ಕಳಿಸುವಂತೆಯೂ ಇಲ್ಲ. ಯಾರಿಗೆ ಗೊತ್ತು? ಇವನು ಹೊರಗೆ ಹೋಗಿ ಅತಿ ಬುದ್ಧಿವಂತಿಕೆ